## ಯಾರ್ರೀ ಮಲ್ಲೇಶ್ವರ?

ಇನ್ನೇನು ಬಸ್ಸು ಹೊರಡುವುದರಲ್ಲಿತ್ತು. ಒಬ್ಬ ವ್ಯಕ್ತಿ ಬಂದು ಅವಸರದಲ್ಲಿ ಬಸ್ಸು ಹತ್ತಿದರು. 'ಒಂದು ಮಲ್ಲೇಶ್ವರಕ್ಕೆ ಕೊಡಪ್ಪಾ' ಅಂದ್ರು. ಕಂಡಕ್ಟರ್ ಮಲ್ಲೇಶ್ವರಕ್ಕೆ ಟಿಕೆಟ್ ಕೊಟ್ಟರು. ಟಿಕೇಟನ್ನು ಜೇಬಿಗಿಳಿಸಿ ಸೀಟಿಗೊರಗಿದರು. ಮಧ್ಯೆ ಒಮ್ಮೆ ಕಣ್ಣು ಬಿಟ್ಟರು. ಇನ್ನೂ ಮೆಜೆಸ್ಟಿಕ್ಕೇ ಎಂದುಕೊಂಡು ಕಣ್ಣು ಮುಚ್ಚಿದರು. ಮತ್ತೊಮ್ಮೆ ಕಣ್ಣು ಬಿಟ್ಟರು. ಕರೆಂಟು ಹೋಗಿದೆ ಎಂದುಕೊಂಡವರೇ ಮತ್ತೆ ನಿದ್ದೆಗೆ ಜಾರಿದರು. ಆಗಾಗ ಕಣ್ಣು ಬಿಟ್ಟು ಕಿಟಕಿಯಾಚೆ ಇಣುಕಿ ಇಣುಕಿ ನೋಡುತ್ತಿದ್ದರು. ಮತ್ತೆ ಗಡಿಯಾರ ನೋಡುತ್ತಿದ್ರು. ಪಕ್ಕದವರನ್ನು ಕೇಳಿದರು, ಸಮಯ ಸರಿಯಾಗೇ ಇದೆ ಅಂದುಕೊಂಡರು. 'ರೀ, ಎದ್ದೇಳ್ರಿ... ನಿಮ್ಮ ಸ್ಟಾಪ್ ಬಂತು' ಕಂಡಕ್ಟರ್ ಅಲುಗಾಡಿಸಿದಾಗ ದಡಬಡಿಸಿ ಎದ್ದು ನಿಂತರು. ಕುಡಿದ ಮತ್ತಿನಲ್ಲಿ ಮೆಜೆಸ್ಟಿಕ್‌ಗೆ ಹೋಗುವ ಬದಲು ಕೆ.ಎಸ್. ಆರ್.ಟಿ.ಸಿ. ಬಸ್ ಹತ್ತಿ, ಮಲ್ಲೇಶ್ವರಕ್ಕೆ ಟಿಕೆಟ್



ತೆಗೆದುಕೊಂಡಿದ್ದರು. ಕುದುರೆಮುಖಕ್ಕೆ ಮಲ್ಲೇಶ್ವರ ಅಂತ ಕರೆಯುತ್ತಿದ್ದರಲ್ಲ, ಅಲ್ಲಿಗೆ ಬಂದು ಇಳಿದು ತಬ್ಬಿಬ್ಬಾಗಿದ್ದರು!

**ಬಿ.ಕೆ. ಮೀನಾಕ್ಷಿ**



## ಇಂಟ್ಳು...!

ನಮ್ಮ ಮನೆಯ ಪಕ್ಕ ಪಿ.ಯು. ಕಾಲೇಜಿಗೆ ಹೋಗುವ ರಸ್ತೆ ಇದೆ. ದಿನವೂ ಹುಡುಗರ ಮಾತುಗಳು ಕೇಳುತ್ತಿರುತ್ತದೆ. ಮಚ್ಚಾ, ಬಾಗೂರು, ಮೆಂಟ್ಲು... ಎಲ್ಲಾ ಸಾಮಾನ್ಯವಾಗಿ ಕಿವಿಗೆ ಬೀಳುವ ಪದಗಳು. ಅಂದು ಅಪರೂಪದ ಪದ 'ಇಂಟ್ಳು' ಎನ್ನುವುದು ಕಿವಿಗೆ ಬಿತ್ತು. ಅಚ್ಚರಿಯಿಂದ ವಠಾರದ ಪಿ.ಯು. ಓದುವ ಹುಡುಗನ ಬಳಿ ವಿಚಾರಿಸಿದೆ. 'ಇಂಟ್ಳು' ಎಂದರೇನು? ಎಂದು. ಕಾಲೇಜಿಗೆ ತಪ್ಪದೇ ಹಾಜರಾಗುವ, ಚೆನ್ನಾಗಿ ಓದುವ, ದಿನವೂ ನೋಟ್ಸ್ ಮಾಡಿಕೊಳ್ಳುವ, ಉತ್ತಮ ಅಂಕ ಪಡೆವ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಇಂಟಲಿಜೆಂಟ್ (ಬುದ್ಧಿವಂತ) ಇರುವವರನ್ನು ಶಾರ್ಟ್ ಆಗಿ ಇಂಟ್ಳು ಅನ್ನುವರು' ಎಂದ. ಪದಕೋಶದ ಹೊರತಾಗಿಯೂ ಹೈಕ್ಳು ಸೃಷ್ಟಿಸುವ ಹೊಸ ಪದ ನಗುತರಿಸಿತು.

**ನಗರ ಗುರುದೇವ್ ಭಂಡಾರ್ಕರ್**